ದಿನಾಂಕಃ 17-07-2025 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟಿ ಸವಾಲುಃ 2 ನೇ ಎದುರುದಾರರ ಪರ ಶ್ರೀ. ಎಸ್. ವಿ. ಎಂ. ವಕೀಲರಿಂದ.

1. ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 1 ನೇ ಎದುರುದಾರರು ನಮ್ಮ ಊರಿನವರು ಇರುತ್ತಾರೆ. ನಾನು ಹಾಗೂ 1 ನೇ ಎದುರುದಾರರು ಅಣ್ಣ ತಮ್ಮಂದಿರು ಎಂದರೆ ಸರಿಯಲ್ಲ. ಬೈಕು ಚಲಾಯಿಸುತ್ತಿದ್ದ ನಿಖಿಲ್ ಗೌಡ ಎಂಬುವವರು ಹೆಚ್. ಮಲ್ಲಿಗೆರೆ ಗ್ರಾಮದವರು ಇರುತ್ತಾರೆ. ಅವರು ನಮ್ಮ ಊರಿನವರು ಅಲ್ಲ ಎಂದರೆ ಸಾಕ್ಷಿ ಅವರು ಆಗಾಗ್ಗ ನಮ್ಮ ಊರಿಗೆ ಬರುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ದಿನದಂದು ಟ್ರಾಕ್ಟರ್ ನ ಬಿಡಿ ಭಾಗಗಳನ್ನು ತರಲು ಹೋಗುತ್ತಿದ್ದೆವು ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹಾಗೂ ನಿಪಿ.2 ರ ದೂರಿನಲ್ಲಿ ನಮೂದು ಮಾಡಿದ್ದು ಸದರಿ ವಿಚಾರವನ್ನು ಈ ಪ್ರಕರಣದ ಅರ್ಜಿಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸದರಿ ದಿನದಂದು ಮಾಯಣ್ಣಗೌಡರ ಟ್ರಾಕ್ಟರ್ ಗೆ ಬಿಡಿಭಾಗಗಳನ್ನು ತರಲು ಹೋಗುತ್ತಿದ್ದೆವು. ಸದರಿ ವಿಚಾರವನ್ನು ಅರ್ಜಿಯಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ.

2. ನಾಗಮಂಗಲ ಸರ್ಕಾರಿ ಆಸ್ಪತ್ರೆಯಲ್ಲಿ ಸುಮಾರು 2 ಗಂಟೆಗಳ ಕಾಲ ಚಿಕಿತ್ಸೆ ಪಡೆದಿದ್ದೇನು. ಹೆಚ್ಚಿನ ಚಿಕಿತ್ಸೆ ಪಡೆದುಕೊಳ್ಳುವಂತೆ ನಾಗಮಂಗಲ ಸರ್ಕಾರಿ ಆಸ್ಪತ್ರೆಯವರು ನನಗೆ ಸಲಹಾ ಚೀಟಿಯನ್ನು ನೀಡಿರಲಿಲ್ಲ. ಮೈಸೂರಿನ ಶುಭೋದಯ ಆಸ್ಪತ್ರೆಯಲ್ಲಿ ನಾನು ಸುಮಾರು ಒಂದು ವಾರ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನು. ಸದರಿ ಆಸ್ಪತ್ರೆಯಲ್ಲಿ ಪ್ರಶಾಂತ್ ಎಂಬ ವೈದ್ಯರು ನನಗೆ ಚಿಕಿತ್ಸೆ ನೀಡಿದ್ದರು. ನಾನು ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ನನಗೆ ಶಸ್ತ್ರ ಚಿಕಿತ್ಸೆ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಸಂಪೂರ್ಣ ಗುಣಮುಖನಾದ ನಂತರ ಶುಭೋದಯ ಆಸ್ಪತ್ರೆಯಿಂದ ಬಿಡುಗಡೆಗೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಡೆಯದಾಗಿ ಈಗ್ಗ 5 ವರ್ಷದ ಹಿಂದೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನು. ಅಪಘಾತವಾದ ಮಾರನೇಯ ದಿನ ನಾನು ಪೊಲೀಸರಿಗೆ ಅಪಘಾತದ ಬಗ್ಗ ದೂರು ನೀಡಿದ್ದೇನು. ನನ್ನ ತಪ್ಪಿನಿಂದ ಅಪಘಾತ ಆಗಿದ್ದು ಅಪಘಾತ ಪರಿಹಾರ ಪಡೆಯುವ ಉದ್ದೇಶದಿಂದ ನಿಖಿಲ್ ಗೌಡ ರವರ ತಪ್ಪಿನಿಂದ ಅಪಘಾತ ಆಗಿತ್ತು ಎಂದು ಸುಳ್ಳು ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಸ್ಥಳ ನೇರವಾದ ರಸ್ತೆ

ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಸ್ವಲ್ಪ ತಿರುವಿನಿಂದ ಕೂಡಿರುತ್ತದೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯಲ್ಲಿ ಯಾವುದೇ ಗುಂಡಿ ಇರಲಿಲ್ಲ ಎಂದರೆ ಸರಿಯಲ್ಲ.

3. ನಾನು ವ್ಯವಸಾಯಗಾರನಾಗಿರುತ್ತೇನೆ, ಹಾಲು ಮಾರಾಟ ಮಾಡುತ್ತೇನೆ ಹಾಗೂ ತರಕಾರಿ ವ್ಯಾಪಾರ ಮಾಡುತ್ತೇನೆ ಎಂದು ಹೇಳಿದ್ದು ಅದಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನನಗೆ ತಿಂಗಳಿಗೆ 25,000/- ರೂಪಾಯಿಗಳ ಆದಾಯವಿರುತ್ತದೆ ಎಂದು ತೋರಿಸುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಚಿಕಿತ್ಸೆಗಾಗಿ ಎರಡೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇನು ಎಂದು ತೋರಿಸುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಅಪಘಾತದ ನಂತರ ಮೊದಲಿನಂತೆ ನನಗೆ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ನಾನು ಮೊದಲಿನಂತೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತ ಆಗಿರುವ ಕಾರಣ 2 ನೇ ಎದರುದಾರರು ಯಾವುದೆ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅರ್ಜಿಯನ್ನು ದಾಖಲಿಸಿ ಸುಳ್ಳು ದಾಖಲೆಗಳನ್ನು ಹಾಜರು ಪಡಿಸಿ ಸುಳ್ಳು ಸಾಕ್ಷಿ ನುಡಿ ಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸಾಧಾರಣ ಗಾಯಗಳು ಮಾತ್ರ ಆಗಿದ್ದವು ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಸಾಕ್ಷಿದಾರರ ಸಹಿಃ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ನಾಗಮಂಗಲ.